# ಕೃಷಿ ಕಾರ್ಮಿಕರ ಸಮಸ್ಯೆಗಳನ್ನು ಕುರಿತು

## ಗ್ರಾಮೀಣ ಸಮಾಜದ ರೂಪರೇಷೆ

ಗ್ರಾಮೀಣ ಸಮಾಜದ ರೂಪರೇಷೆಯನ್ನು ಸ್ಥೂಲವಾಗಿಯಾದರೂ ನಾವು ಗಮನಿಸಬೇಕು. ಒಂದು ಕಟ್ಟಡವನ್ನು ಗಮನಿಸದೆ ಅದರ ಒಂದು ಭಾಗವಾದ ಕೋಣೆಯನ್ನೋ ಮಾಡನ್ನೋ ಪರೀಕ್ಷಿಸುವುದು ಹೇಗೆ ಸಾಧ್ಯ ? ಅಲ್ಲದೆ, ಚರ್ಚೆ ಫಲಪ್ರದವಾಗಬೇಕಾದರೆ, ನಿಖರವಾದ ಮಾತುಗಳನ್ನು ಕರಾರುವಾಕ್ಕಾದ ಅರ್ಥದಲ್ಲಿ ಬಳಸಬೇಕು. ಸಾಮಾನ್ಯ ಜೀವನದಲ್ಲಿ ಕೂಡ ನಾವು ಅಂಗಡಿಗೆ ಹೋಗಿ ತರಕಾರಿ ಕೊಡಿ ಎಂದು ಕೇಳುವುದಿಲ್ಲ. ಇಂತಹ ತರಕಾರಿ ಇಂತಿಷ್ಟು ಪರಿಮಾಣ ಎಂದೇ ನಿಖರವಾಗಿ ಕೇಳುತ್ತೇವೆ. ಸಂಘಟನೆ ಎಂಬ ಕಟ್ಟಡಕ್ಕೆ ತನ್ನದೇ ಗುಣಧರ್ಮ ಉಂಟು. ಕೃಷಿ ಕಾರ್ಮಿಕರು ಅಂಚಲ ರೈತರು ಸಣ್ಣ ರೈತರು ನಡುಕಲ ರೈತರು ದೊಡ್ಡ ರೈತರು ಕನಿಷ್ಟಕೂಲಿ ಎಂಬ ಮಾತುಗಳಿಗೆ ನಿಶ್ಚಿತ ಅರ್ಥವಿದೆ. ಕಲ್ಲಿನ, ಮಣ್ಣಿನ, ಮರದ ಗುಣ ತಿಳಿಯದೆ ಅವನ್ನು ಜೋಡಿಸಿ ಮನೆಕಟ್ಟುವುದು ಹೇಗೆ ? ಸಮಾನ ಮನಸ್ಕರ ಮೇಲೆ ಆಧಾರಪಟ್ಟು ಅವರ ಹಿತಗಳಿಗೆ ಸಮಂಜಸವಾದ ಗುರಿಗಳೆಡೆಗೆ ಸಾಗುವ ಚಳುವಳಿ ಮಾತ್ರ ಯಶಸ್ವಿ ಆಗಬಲ್ಲುದು. ಅದಕ್ಕೆ ನಿಖರವಾದ ಚಾಲನಶಕ್ತಿ ಗುಣಧರ್ಮ ಒಳಸತ್ವ ಇರುತ್ತದೆ. ಹಲವು ದಿಕ್ಕುಗಳಲ್ಲಿ ಹರಿಯುವ ಕಲ್ಲು ಮಣ್ಣು ಬೆರೆತ ನೀರು ನದಿಯಂತೆ ತನ್ನ ಗುರಿ ತಲುಪೀತೆ ? ಆದುದರಿಂದ ಕೃಷಿ ಕಾರ್ಮಿಕರ ಸಮಸ್ಯೆಗಳನ್ನು ಕುರಿತು ವಿಚಾರ ಮಾಡುವಾಗ ಸಮಗ್ರ ಗ್ರಾಮ ಸಮಾಜದ ಚಿತ್ರಣ, ವಿಷಯ ನಿರೂಪಣೆ, ವಿಶ್ಲೇಷಣೆ ಹಾಗೂ ಇತ್ಯರ್ಥಗಳಿಗೆ ಕಾರ್ಯವಾಸಿಯಾದ ಕಲ್ಪನೆಗಳನ್ನು ಬಿಂಬಿಸುವ ನಿಶ್ಚಿತವಾದ ಮಾತುಗಳು, ಸಂಘಟನೆಯ ರೂಪರೇಷೆ ಗುಣಧರ್ಮದ ಬಗ್ಗೆ ಸ್ಪಷ್ಟವಾದ ತಿಳುವಳಿಕೆ, ಚಳುವಳಿಯ ಚಾಲನಶಕ್ತಿಗಳ ಬಗ್ಗೆ ಕರಾರುವಾಕ್ಕಾದ ವಿಚಾರಗಳು ಅಗತ್ಯ. ನಗರಗಳಲ್ಲಿ ಕೂಲಿಗಾರರು ತಮಗಿಂತ ಎಷ್ಟೋ ಪಾಲು ಶಕ್ತಿ ಧನ ಅಧಿಕಾರ ಸಂಪನ್ನರೂ ಆದವರ ಮೇಲೆ ಹೋರಾಟ ಮಾಡುತ್ತಾರೆ. ಎಷ್ಟೋಬಾರಿ ಗೆಲ್ಲುತ್ತಾರೆ. ಅವರ ಹೋರಾಟದಲ್ಲಿ ಅಂತಹ ಸಮಗ್ರ ತಿಳುವಳಿಕೆ, ನಿಶ್ಚಿತವಾದ ಸಂಘಟನೆ, ಗುರಿಬದ್ಧ ಚಳುವಳಿ ಇರುತ್ತವೆ. ಅಂತೆಯೇ ಅವರ ಗೆಲ್ಲುವು, ಪ್ರಗತಿ, ಶಕ್ತಿ.

ಗ್ರಾಮೀಣ ಕೃಷಿಕಾರ್ಮಿಕರ ಸಮಸ್ಯೆಗಳೇನು ? ಬೇರೆಯವರ ವರಮಾನಕ್ಕೆ ಹೋಲಿಸಿದರೆ ಬಲು ಕಡಿಮೆ ಕೂಲಿ. ಸರ್ಕಾರ ನಿಗದಿ ಮಾಡಿದಂತೆಯೇ ಈ ದಿನಕೂಲಿ ಇವತ್ತು ದೇಶದ ವಿವಿಧ ಭಾಗಗಳಲ್ಲಿ ಮೂರು ರೂಪಾಯಿಯಿಂದ ಐದು ರೂಪಾಯಿ ಇದೆ. ಹೆಂಗಸರಿಗೆ ಇನ್ನೂ ಕಡಿಮೆ. ಮಕ್ಕಳಿಗೆ ಮತ್ತೂ ಕಡಿಮೆ. ಸರ್ಕಾರದ ಲೆಕ್ಕದಂತೆ ಕರ್ನಾಟಕದಲ್ಲಿ ಕೃಷಿಕಾರ್ಮಿಕರ ಮನೆಯಲ್ಲಿ ಸರಾಸರಿ 4.65 ಮಂದಿ ಅಥವಾ ಐದುಮಂದಿ ಇರುತ್ತಾರೆ. ಅವರ ಪೈಕಿ ದುಡಿಯುವವರು 2.29 ಮಂದಿ. ಕೃಷಿಕೆಲಸಗಾರರಲ್ಲಿ 37.61 ಹೆಣ್ಣಾಳುಗಳು. ವರುಷಕ್ಕೆ ಕುಟುಂಬದ ಸರಾಸರಿ ಉತ್ಪತ್ತಿ 1970—71 ರಲ್ಲಿ ರೂ. 1051.09 ಪೈಸೆ. ಇದೆಲ್ಲ ಸರ್ಕಾರಿ ಲೆಕ್ಕ. ಅಂದರೆ ದಿನಕ್ಕೇ ಇಡೀ ಕುಟುಂಬಕ್ಕೆ ಬದುಕಲು 3 ರೂಪಾಯಿ. ಇವತ್ತು 6 ರೂಪಾಯಿ ಇದ್ದೀತು. ಇದರ ಅರ್ಥ ಏನು? ವರ್ಷದಲ್ಲಿ ಕೆಲಸ ಗಂಡಸರಿಗೆ 8 ತಿಂಗಳು, ಹೆಂಗಸರಿಗೆ 6 ತಿಂಗಳು. ಇಡೀ ಕುಟುಂಬದವರೆಲ್ಲ ದುಡಿದರೂ ಒರೇ ಹೊಟ್ಟೆ ತುಂಬುವುದಿಲ್ಲ. ಜೈಲಿನಲ್ಲಿ ಖೈದಿಗಳಿಗೆ ಕೊಡುವ ಕನಿಷ್ಠ ಊಟ ಕೂಡ ಕೃಷಿಕಾರ್ಮಿಕರಿಗೆ ದುಡಿದೂ ಗಿಟ್ಟುವುದಿಲ್ಲ, ಕರ್ನಾಟಕದಲ್ಲಿ ದುಡಿಯುವ ಜನರ ಪೈಕಿ ಶೇ. 26.71 ಮಂದಿ ಅಥವಾ ಕೃಷಿ ಮಾಡುವ ಒಟ್ಟು ಜನರಲ್ಲಿ 40.35 ಮಂದಿ ಕೃಷಿಕಾರ್ಮಿಕರು ಅಂದರೆ ಕರ್ನಾಟಕದ ದುಡಿಯುವರ ಪೈಕಿ ಮೂರರಲ್ಲಿ ಒಂದುಭಾಗ ದುಡಿಯಲು ತಯಾರಿದ್ದರೂ ಕೆಲಸ ಇಲ್ಲ; ಕೆಲಸ ಇದ್ದರೂ ಹೊಟ್ಟೆ ಬಟ್ಟೆಗೆ ಆಗುವಷ್ಟು ಕೂಲಿ ಇಲ್ಲ. ನಗರದಲ್ಲಿ ಮುನಿಸಿಪಾಲಿಟಿಯ ಕೆಲಸಗಾರನಿಗೆ ತಿಂಗಳಿಗೆ ರೂ. 350 ಸಂಬಳ ವರ್ಷವಿಡೀ ಉಂಟು. ಕೃಷಿಕಾರ್ಮಿಕನಿಗೆ ತಿಂಗಳಿಗೆ ರೂ. 150 ಸಂಪಾದನೆ ಆರು ತಿಂಗಳು ಮಾತ್ರ ಉಂಟು.

ಎರಡನೆಯ ಪ್ರಶ್ನೆ, ಇವರಿಗೆ ವಯಸ್ಸಾದರೆ, ರೋಗ ಬಂದರೆ, ಅಪಘಾತ ಆಗಿ ಕೈಕಾಲು ಮುರಿದರೆ ಏನೂ ಪರಿಹಾರ ಇಲ್ಲ. ನಗರದ ಕಾರ್ಮಿಕರಿಗೆ ಇದೆಲ್ಲ ಉಂಟು— ವಯಸ್ಸಾಗಿ ಕೆಲಸದಿಂದ ತೆಗೆದರೆ ಪೆನಷನ್. ಅವನಿಗೆ ಅವನ ಮನೆಯವರಿಗೆ ಕಾಯಿಲೆ ಬಂದರೆ ಮದ್ದು, ಅವನಿಗೆ ರಜಾ, ಹೆಣ್ಣು ಕೆಲಸಗಾರರಿಗೆ ಹೆರಿಗೆ ರಜಾ ಮತ್ತು ಸಂಬಳ ; ಕೈಕಾಲು ಮುರಿದು ಅಶಕ್ತನಾದರೆ ನಾಲ್ಕಾರು ಸಾವಿರ ರೂಪಾಯಿ ಪರಿಹಾರ—ಇದೆಲ್ಲ ಉಂಟು. ಭೂಹೀನ ಕೆಲಸಗಾರನಿಗೆ ಇದು ಏನೇನೂ ಇಲ್ಲ. ದುಡಿಯುವ ವಯಸ್ಸು ತೀರಿದ ಮೇಲೆ ಆತ ಮುದಿ ದನದಂತೆ ಬೀದಿ ಪಾಲು ; ರೋಗ ಬಂದರೆ, ಹೆರಿಗೆ ಆದರೆ ಉಳಿದರೆ ದೊಡ್ಡದು ; ಕೈಕಾಲು ಮುರಿದರೆ, ಅವನಿಗೂ ಅವನ ಕುಟುಂಬಕ್ಕೂ ಭಿಕ್ಷಾಟನೆಯೇ ಗತಿ. ಇವರ ಸಂಖ್ಯೆ 1971 ರಲ್ಲಿ 26 ಲಕ್ಷ. ಇವತ್ತು 35 ಲಕ್ಷ ಇದ್ದೀತು.

ಇನ್ನೂ ಇರಲು ಮನೆ, ಮಕ್ಕಳಿಗೆ ಶಾಲೆ, ಬೇಸರವಾದರೆ ಮನರಂಜನೆ—ಇದನ್ನೆಲ್ಲ ಕೇಳಬೇಕಿಲ್ಲ. ಸಾಲದ್ದಕ್ಕೆ ಆತ ಸಾಲಗಾರ, ಜೀತಗಾರ. ಕರ್ನಾಟಕದಲ್ಲಿ ಬಹುಶೇಕ ಕೃಷಿಕೆಲಸಗಾರರು ಹರಿಜನ, ಗಿರಿಜನ, ಹಿಂದುಳಿದವರು. ಸಾಲ, ಜೀತ ಪಜಾ ಆಗಿದೆ. ಆದರೂ ಪೋಲೀಸರೂ ಗುಮಾಸ್ತರೂ ಧನಾಢ್ಯರೂ ಬಲಾಢ್ಯರೂ ಒಂದಾಗಿರುವುದರಿಂದ ಸರ್ಕಾರ ಕಛೇರಿಯಲ್ಲಿ ಪೋಲೀಸ್ ಸ್ಟೇಷನ್ನಿನಲ್ಲಿ ಕಿರುಕುಳ ತಪ್ಪಿದ್ದಲ್ಲ. ಇವರಿಗೆಂದು ಮಾಡಿದ ನಿವೇಶನಗಳನ್ನು ಇತರರು ಕಬಳಿಸಿದ್ದೂ ಉಂಟು. ಸುಳ್ಳು ಮೊಕದ್ದಮೆ ಹಾಕಿಸಿದ್ದೂ ಉಂಟು. ಇದು ಬದುಕಲ್ಲ, ಚಿತ್ರಹಿಂಸೆ.

ಇನ್ನೊಂದು ಕಡೆ ಚಿತ್ರವನ್ನು ನೋಡೋಣ. ಪಂಚಾಯಿತಿಯಲ್ಲಿ, ಸಹಕಾರ ಸಂಘದಲ್ಲಿ, ಶಾಲೆ, ದೇವಸ್ಥಾನಗಳಲ್ಲಿ, ತಾಲ್ಲೂಕು ಬೋರ್ಡು, ಪೋಲೀಸ್ ಸ್ಟೇಷನ್‌ಗಳಲ್ಲಿ ಅಧಿಕಾರ ಹಿಡಿದವರು ಗ್ರಾಮದ ಹಿರಿಜನ, ಹಿರಿಜಾತಿ ; ಜಮೀನಿನ ಬಹುಭಾಗ ಅವರದ್ದು. ಸಾಲ ಕೊಡುವ ಧಣಿ ಅವರು, ಸರ್ಕಾರ ನಡೆಸುವ ಯಜಮಾನರು ಅವರು. ಈ ಮಾತುಗಳನ್ನು ಇನ್ನಷ್ಟು ಬಿಡಿಸಿ ನೋಡೋಣ. ನಮ್ಮ ರಾಜ್ಯದಲ್ಲಿ ಸುಮಾರು 40 ಲಕ್ಷ ಕೃಷಿ ಕುಟುಂಬಗಳಿವೆ. ಅವರ ಪೈಕಿ ಬರೇ ಸುಮಾರು 4 ಲಕ್ಷ ಜನರಿಗೆ ಪಂಪುಸೆಟ್ಟು ಇದ್ದೀತು. ಬರೇ ಸುಮಾರು 7 ಲಕ್ಷ ಎತ್ತಿನ ಗಾಡಿಗಳಿವೆ. ಇದರ ಪೈಕಿ ಒಂದೆರಡು ಲಕ್ಷ ನಗರದಲ್ಲಿ 5 ಲಕ್ಷ ಹಳ್ಳಿಗಳಲ್ಲಿರಬಹುದು. ಅಂದರೆ ಸುಮಾರು 5—6 ಲಕ್ಷ ಕುಟುಂಬಗಳು ಪಂಪು, ಗಾಡಿ, ಕಬ್ಬಿಣದ ನೇಗಿಲು ಪಡೆದಿದ್ದಾರೆ. ಇವರ ಜಮೀನಿಗೆ ನೀರಾವರಿ ಇದೆ. ಅವರು ಸೀಮೆಗೊಬ್ಬರ ಬೆಳೆಸುತ್ತಾರೆ. ಅವರ ಮಕ್ಕಳು ಸ್ಕೂಲು ಶಾಲೆಗಳಿಗೆ ಹೋಗುತ್ತಾರೆ. ಕಬ್ಬು, ಭತ್ತ, ಹೊಗೆಸೊಪ್ಪು, ಹತ್ತಿ ಶೇಂಗಾ ಬೆಳೆದು ಮಾರುತ್ತಾರೆ. ಅವರು ವ್ಯಾಪಾರಿ ಕೃಷಿಕರು. ಅಧಿಕಾರ ಅವರದ್ದು. ಅರ್ಧಭಾಗಕ್ಕಿಂತ ಹೆಚ್ಚು ಜಮೀನು ಈ ಹತ್ತರಲ್ಲಿ ಒಂದು ಪಾಲು ಜನರಲ್ಲಿದೆ. ಅವರು 20–50 ಎಕರೆ ಒಡೆಯರು. ಇದರಲ್ಲಿಯೇ ಕೃಷಿಕಾರ್ಮಿಕರು ದುಡಿಯುವುದು. ಗ್ರಾಮದಲ್ಲಿ ಇವರೇ ಧಣಿಗಳು. ಗ್ರಾಮೀಣ ಶ್ರೀಮಂತರಾದ ಶೇ. 10 ರಷ್ಟು ಇರುವ ಈ ಜನ ಗ್ರಾಮೀಣ ವರಮಾನದ ಶೇ. 36.01 ಭಾಗವನ್ನು ಕಬಳಿಸುತ್ತಾರೆ. ಗ್ರಾಮೀಣ ಆಸ್ತಿ ಪೈಕಿ ಶೇ. 30 ಪಾಲು ಬರೇ ಶೇ. 4 ಜನ ಗ್ರಾಮೀಣ ಧನಾಢ್ಯರ ಬಳಿಯಿದೆ. ಬಡವರ ಬದುಕು ಇವರ ಕೈಯಲ್ಲಿದೆ. ಪೋಲೀಸರು ಅಧಿಕಾರಿಗಳು ಅವರ ಕೈಗೊಂಬೆಗಳು. ಗ್ರಾಮದ ಬಡವರನ್ನು ಸುಲಿಯುವವರು ದಂಡಿಸುವವರು ಇವರೇ ಚುನಾವಣೆಯಲ್ಲಿ ಮೆರೆಯುವವರು, ಗೆಲ್ಲುವವರು ಇವರೇ.

ಹೀಗೆ ಗ್ರಾಮಸಮಾಜದಲ್ಲಿ ಒಂದು ಕಡೆ 30 ಲಕ್ಷ ಕಡುಬಡವರೂ ಇನ್ನೊಂದು ಕಡೆ 5 ಲಕ್ಷ ಧನಾಢ್ಯರೂ, ಬಲಾಢ್ಯರೂ, ಹಿರಿಜಾತಿಯವರೂ ಆದ ಭೂ ಒಡೆಯರು.

ಇದು ಸುಮಾರು ಕರ್ನಾಟಕದ ಚಿತ್ರ. ಇವರ ನಡುವೆ ಇನ್ನೊಂದು ಮೂವತ್ತೈದು ಲಕ್ಷ ರೈತರಿದ್ದಾರೆ. ಅವರಲ್ಲಿ 4-5 ಲಕ್ಷ ಜನ 5 ರಿಂದ 10 ಎಕರೆ ಇರುವ ನಡುಕಲ ರೈತರು. 10-15 ಲಕ್ಷ ಜನ ಅರ್ಧ ಒಂದು ಎಕರೆ ಇರುವ ಅಂಚಲ ರೈತರು. ಇನ್ನೊಂದು 10-15 ಲಕ್ಷಜನ ಒಂದು ಎರಡು ಎಕರೆ ಇರುವ ಸಣ್ಣ ರೈತರು. ಸಣ್ಣ ರೈತರೂ ಅಂಚಲ ರೈತರಿಗೂ ನೀರಾವರಿ, ಉತ್ತಮ ಬೀಜವರಿ, ಸೀಮೆ ಗೊಬ್ಬರ, ಲಾಭದಾಯಕ ಫಸಲು ಇದೆಲ್ಲ ಕನಸು. ಇವರು ಕೃಷಿಕಾರ್ಮಿಕರಂತೆ ಇರುವವರು. ಬಹುಭಾಗ ಇವರ ದುಡಿಮೆಯ ಫಸಲು ಮಾರಾಟಕ್ಕಲ್ಲ; ಹೊಟ್ಟೆಗೆ. ಕೃಷಿಕಾರ್ಮಿಕರ ಪೈಕಿ 68.59 ಮಂದಿ ಅಲ್ಪ ಸ್ವಲ್ಪ ಜಮೀನು ಇರುವ ಭೂ ಕೃಷಿಕಾರ್ಮಿಕರು. ಅಂದರೆ ಅಂಚಲ ರೈತರು, ಸಣ್ಣ ರೈತರು. 31.41 ಮಂದಿ ಜಮೀನು ಇಲ್ಲದ ಅಪ್ಪಟ ಭೂಹೀನ ಕೃಷಿಕಾರ್ಮಿಕರು. ಇವರ ಸಂಖ್ಯೆ ಬೆಳೆಯುತ್ತಿದೆ. 1961ರಲ್ಲಿ ಜಮೀನಿದ್ದ ಬೇಸಾಯಗಾರರು 58.06 ಮಂದಿ ಇದ್ದರೆ 1971ರಲ್ಲಿ 40.2 ಲಕ್ಷ ಇದ್ದರು. ಕೃಷಿಕಾರ್ಮಿಕರು 1961ರಲ್ಲಿ 17.61 ಲಕ್ಷ ಇದ್ದರು 1971ರಲ್ಲಿ 27.17 ಆದರು. ಕೃಷಿಕರ ಸಂಖ್ಯೆ ಇಳಿದು ಭೂಹೀನ ಕೃಷಿಕಾರ್ಮಿಕರ ಸಂಖ್ಯೆ ಏರುತ್ತಿದೆ. ಹೀಗೆ ಗ್ರಾಮಸಮಾಜ ಒಡೆದಿದೆ. 5 ಲಕ್ಷ ದೊಡ್ಡ ರೈತರು ; 5 ಲಕ್ಷ ನಡುಕಲು ರೈತರು ; 10-15 ಲಕ್ಷ ಸಣ್ಣ ರೈತರು. 10-15ಲಕ್ಷ ಅಂಚಲ ರೈತರು ; 30ಲಕ್ಷ ಜನ ಭೂಹೀನ ಕಾರ್ಮಿಕರು. ಇದು ವರ್ಗಚಿತ್ರ. ಸಣ್ಣ ರೈತರೂ ಅಂಚಲ ರೈತರೂ ಕೃಷಿಕಾರ್ಮಿಕರ ಜೊತೆಗಿರುತ್ತಾರೆ. ಅವರ ಹಿತ, ಅವರ ಸ್ಥಿತಿ, ಅವರ ತಿಳುವಳಿಕೆ ಎಲ್ಲ ಒಂದೇ ಆಗಿರುತ್ತದೆ. ಆದರೆ ನಡುಕಲ ರೈತರ ಆಸೆ ದೊಡ್ಡ ರೈತರ ಕಡೆಗೂ ವಾಸ್ತವಿಕ ಸ್ಥಿತಿಗತಿ ಸಣ್ಣ ರೈತರ ಕಡೆಗೂ ಎಳೆಯುತ್ತಿರುತ್ತದೆ. ಅವರು ಯಾವಕಡೆ, ಬಹುಸಂಖ್ಯಾತ ಬಡವರ ಕಡೆಗೋ, ಅಲ್ಪಸಂಖ್ಯಾತ ಧನಿಕರ ಕಡೆಗೋ ? ಅನುಭವದಿಂದ ಅವರು ಅದನ್ನು ನಿರ್ಧರಿಸುತ್ತಾರೆ. ಕೃಷಿಕಾರ್ಮಿಕರೂ ಸಣ್ಣ ರೈತರೂ ಅಂಚಲ ರೈತರೂ ಕೂಡ ಒಗ್ಗಟ್ಟಾಗಿ ಸಂಘಟನೆ ಮಾಡಬೇಕು. ಕರ್ನಾಟಕದಲ್ಲಿ ಗೇಣಿದಾರರು ಜಮೀನು ಪಡೆದು ಪಡೆಯಲಿದ್ದು ಬಹುತೇಕ ಸಣ್ಣ ರೈತರಾಗಿದ್ದಾರೆ. ಅವರ ಪೈಕಿ ನಡುಕಲ ರೈತರೂ ದೊಡ್ಡ ರೈತರೂ ಅವರವರ ಗುಂಪಿಗೆ ಸಲ್ಲುತ್ತಾರೆ.

## ಕೃಷಿ ಕಾರ್ಮಿಕರ ಸಂಘಟನೆ

ಗ್ರಾಮೀಣ ಬಡವರೆಲ್ಲರೂ ಕೃಷಿಕಾರ್ಮಿಕರಲ್ಲ. ಗ್ರಾಮದಲ್ಲಿ ಕೆಲಸ ಮಾಡುವ ಚಮ್ಮಾರರು, ಕಮ್ಮಾರರು, ನೇಕಾರರು, ಸಿಂಪಿಗರು, ನಾಯಿಂದರು, ಅಗಸರು ಕೂಡ ಬಡವರು. ಆದರೆ ಅವರು ಕೃಷಿಕಾರ್ಮಿಕರಲ್ಲ. ಕೃಷಿಕಾರ್ಮಿಕರು ಕೃಷಿಯಲ್ಲಿ ಕೂಲಿಗೆ ತೊಡಗಿರುವವರು ; ಅವರ ಧಣಿಗಳು ಕೃಷಿಜಮೀನಿನ ಮಾಲಿಕರು. ಇತರ ಬಡವರಿಗೆ ಅವರು ಹೀಗೆ ನೇರವಾಗಿ ಧಣಿಗಳಲ್ಲ. ಆದುದರಿಂದ ಕೃಷಿಕಾರ್ಮಿಕರ ಸ್ಥಿತಿಗತಿಗೆ ಅವರನ್ನು ಗುರಿ ಮಾಡಲಾಗದು. ಅವರ ಸಲುವಾಗಿ ಭೂ ಧಣಿಗಳ ಮುಂದೆ ಬೇಡಿಕೆ ಇಡಲಾಗದು. ಆದುದರಿಂದ ಕೃಷಿಕಾರ್ಮಿಕರ ಸಂಘಟನೆಯಲ್ಲಿ ಇತರ ಬಡವರನ್ನು ಸೇರಿಸಿ

ದರೆ ವರ್ಗ ಸುಖಕರವಾಗಿ ಗಲಿಬಿಗಿಯಾಗುತ್ತದೆ. ಆದ್ದರಿಂದ ಕೃಷಿಕಾರ್ಮಿಕರ ಸಂಘಟನೆ ಸ್ಪಷ್ಟವಾಗಿ ನಿರ್ದಿಷ್ಟವಾಗಿ ಕರಾರುವಾಕ್ಕಾಗಿ ವರ್ಗಸಂಘಟನೆ. ಅದರಲ್ಲಿ ಸಮಾನ ಮನಸ್ಕರಾದ ಸಣ್ಣ, ಹಾಗೂ ಅಂಚಲ ರೈತರು ಸೇರಬಹುದು, ಸೇರಬೇಕು. ಆದರೆ ಈ ಸಂಘಟನೆಯ ಮುಖ್ಯಧನಿ ಕಾರ್ಯಧಾಟಿ ಕೃಷಿಕಾರ್ಮಿಕರದ್ದು. ಉದಾಹರಣೆಗೆ ಬಹುತೇಕ ಕೃಷಿಕಾರ್ಮಿಕರು ಹರಿಜನ ಗಿರಿಜನರು. ಅವರ ಮಹಿಳೆಯರೂ ಕೆಲಸ ಮಾಡುತ್ತಾರೆ. ಹರಿಜನರು ಗಿರಿಜನರು ಅವರ ಮಹಿಳೆಯರ ಮೇಲೆ ಅತ್ಯಾಚಾರ ನಡೆದಾಗ, ಕೃಷಿಕಾರ್ಮಿಕರ ಸಂಘಟನೆ ನೇರವಾಗಿ ಪ್ರತಿಭಟಿಸಬೇಕು. ನಡುಕಲ ರೈತರ ಮೇಲೆ ಅಂತಹ ದಾಳಿ ನಡೆಯುವುದು ಅಪರೂಪ. ಅವರ ಮಹಿಳೆಯರು ಹೊಲದಲ್ಲಿ ಕೆಲಸ ಮಾಡುವುದೂ ಅಪರೂಪ. ಕೆಲವು ಸಾರಿ ದಾಳಿ ಅವರಿಂದಲೇ ನಡೆದೀತು. ಅವರು ಇಂತಹ ಸಮಸ್ಯೆ ಬಂದಾಗ ಅಪಸ್ವರ ಎತ್ತಬಾರದು. ಅಥವಾ ಕೂಲಿ ಏರಿಕೆ ಮಾತು ಬಂದಾಗ, ಕೂಲಿಯವರನ್ನು ನೇಮಿಸಿ ದುಡಿಸುವ ಇವರು ಅಡ್ಡಗಾಲು ಹಾಕಬಾರದು.

ಕೃಷಿಕಾರ್ಮಿಕರಿಗೆ ಇವತ್ತು ಸಂಘಟನೆ ಇಲ್ಲ. ಸಂಘಟನೆ ಮಾತ್ರ ಇವರಿಗೆ ಬಲ ಕೊಡಬಲ್ಲುದು. ಕೃಷಿಕಾರ್ಮಿಕರಿಗೆ ಹಾಗೂ ಅಗತಕ್ಕ ಕನಿಷ್ಠ ಕೂಲಿಕಾನೂನು ಜಾರಿಗೆ ಬಂದು 32 ವರ್ಷ ಆಯಿತು. ಆದರೂ ಯಶಸ್ವಿಯಾಗಿ ಜಾರಿ ಆಗಿಲ್ಲ. ಕಳೆದ 30 ವರುಷದಲ್ಲಿ ಬೆಲೆಗಳು ಪ್ರಾಯಶಃ ಒಂದಕ್ಕೆ ಆರರಷ್ಟು ಏರಿವೆ. ಆದರೂ ಕೂಡ ಕೂಲಿಗಳನ್ನು ಏರಿಸಿದ್ದು ಬರೇ ನಾಲ್ಕು ಐದು ವರ್ಷಕ್ಕೊಮ್ಮೆ. ಕನಿಷ್ಟ ಆರೋಗ್ಯದ ಸೌಲಭ್ಯದ ಅಗತ್ಯ ಇವರಿಗೆ ಬಹಳವಿದೆ. ಆದರೂ ಆ ಬಗ್ಗೆ ಏನೇನೂ ಆಗಿಲ್ಲ. ಇಷ್ಟಾದರೂ, ಕೃಷಿಕಾರ್ಮಿಕರು ಸಂಘಟನೆ ಆಗಿಲ್ಲ. ಆದ್ದರಿಂದ ಕಾನೂನಿನಲ್ಲಿ ಹಾಗೂ ಇವತ್ತಿನ ವ್ಯವಸ್ಥೆಯಲ್ಲಿ ಸಾಧ್ಯವಿದ್ದ ಸವಲತ್ತು ಅವರಿಗೆ ದೊರಕಿಲ್ಲ. ಸಂಘಟನೆ ಅಗತ್ಯ ಕುರಿತು ಸುಪ್ರಸಿದ್ಧ ವಿಕಾಸ ಶಾಸ್ತ್ರಜ್ಞ ಗುನ್ನಾರ್ ಮಿರ್ಡಾಲ್ ಹೀಗೆನ್ನುತ್ತಾರೆ.

"ಮೇಲಿನವರ ಪ್ರಯತ್ನದಿಂದ ಯಾವ ಸಮಾಜವು ಹೆಚ್ಚು ಸುಧಾರಣೆ ಆಗಿಲ್ಲ. ಒಂದು ವರ್ಗಸಮುದಾಯ ತನ್ನ ಅಂತಸ್ಸಾಕ್ಷಿಯ ಪ್ರೇರೇಪಣೆಯಿಂದ ಸ್ವಇಚ್ಛೆಯಿಂದ ನಿರ್ಣಯ ತೆಗೆದುಕೊಂಡು ತಮಗಿಂತ ಕೆಳವರ್ಗದ ಜನರೊಡನೆ ಸರಿಸಮಾನವಾಗಿ ತಮ್ಮ ವಿಶೇಷ ಹಕ್ಕುಗಳನ್ನು ಎಂದೂ ಹಂಚಿಕೊಂಡದ್ದಿಲ್ಲ. ಆದರ್ಶಗಳೂ, ಆತ್ಮಸಾಕ್ಷಿಯೂ ತಮ್ಮ ಕೊಡುಗೆಯನ್ನು ಸಮಾಜಸುಧಾರಣೆಗೆ ನೀಡುತ್ತವೆ ; ನಿಜ. ಇದನ್ನು ಮರೆಯಬಾರದು. ಆದರೆ ಅವು ಸ್ವಯಂಚಾಲಿತವಾಗಿ ಸುಧಾರಣೆ ಮಾಡುವಲ್ಲಿ ದುರ್ಬಲ ಶಕ್ತಿಗಳು ದೊಡ್ಡ ಪ್ರಮಾಣದಲ್ಲಿ ಸುಧಾರಣೆ ಆಗಬೇಕಾದರೆ, ಕುಂದುಕೊರತೆ ಇರುವ ಜನರೇ ಒಂದುಗೂಡಿ, ಬೇಡಿಕೆಗಳನ್ನು ನಿರೂಪಿಸಿ ಒತ್ತಾಯ ಮಾಡಬೇಕು. ಆಗಮಾತ್ರ ಮೇಲಿನವರ ಆದರ್ಶಗಳೂ ಆತ್ಮಸಾಕ್ಷಿಯೂ ಪರಿಣಾಮಕಾರಿಯಾಗಿ ಕೆಲಸ ಮಾಡಬಲ್ಲುವು."

ಇದುವರೆಗೂ ಗ್ರಾಮೀಣ ಕೃಷಿಕಾರ್ಮಿಕರ ಸಂಘಟನೆ ಆಗಿಲ್ಲ. ಇದಕ್ಕೆ ಕಾರಣ ಗ್ರಾಮೀಣ ಧನಾಢ್ಯ ಬಲಾಢ್ಯ ಜನರ ಮೂಲದವರೇ ದೇಶದ ಎಲ್ಲ ಕಡೆ ನೇತೃತ್ವ ವಹಿಸಿರುವುದು. ಸಮಾಜಸುಧಾರಣೆಯ ಚಳುವಳಿ ಇಷ್ಟು ದುರ್ಬಲವಾಗಿರಲೂ ಇದೇ ಕಾರಣ. ಬಂಡವಾಳಶಾಹಿ ವಿರುದ್ಧ ಹೋರಾಡಲು ಗ್ರಾಮೀಣ ಧನಾಢ್ಯ ಬಲಾಢ್ಯರ ಮನೆತನದ ಯುವಕರು ಸಿದ್ಧ. ಏಕೆಂದರೆ ಅದಕ್ಕೆ ರಕ್ತಸಂಬಂಧದ ಅಡ್ಡಿ ಆತಂಕವಿಲ್ಲ. ಆದರೆ, ಭೂಮಾಲಿಕರ, ಹಿರಿಜಾತಿಯವರ ವಿರುದ್ಧ ಹೋರಾಡಬೇಕಾದರೆ, ತಿಳಿದೋ ತಿಳಿಯದೆಯೋ ಈ ರಕ್ತಸಂಬಂಧ ಅಡ್ಡಿ ಆತಂಕ ಒಡ್ಡುವುದು. ಆದುದರಿಂದಲೇ ಅವರ ಸಂಘಟನೆಗೆ ನೇತೃತ್ವ ಕೃಷಿಕಾರ್ಮಿಕರಿಂದಲೇ ಬರಬೇಕು. ತಮ್ಮ ವರ್ಗದ ಜಾತಿಯ ವ್ಯಾಮೋಹವನ್ನು ತೊರೆದ ಹಿರಿಜಾತಿ ಯುವಕರು ಇದಕ್ಕೆ ನೆರವಾಗಬೇಕು.

ಕೃಷಿ ಕಾರ್ಮಿಕರ ಸಂಘಟನೆ ಕುರಿತು ಮಾತನಾಡುವಾಗ ಒಂದು ಮಾತನ್ನು ಎಚ್ಚರಿಸಬೇಕು. ಇಡೀ ಗ್ರಾಮ ಸಮಾಜ, ವರ್ಗ, ವರ್ಣಭೇದವಿಲ್ಲದ ಸಾಮರಸ್ಯದ ಹಾಲು ಜೇನು ಜಿನುಗುವ ಒಂದು ಭಾರಿ ಭ್ರಾತೃಭಗಿನಿ ಸಮುದಾಯವೆಂತಲೂ, ಇಡೀ ನಗರಗಳು ಕ್ರೂರ ಶೋಷಕರ ಕುಟಿಲಕಾರಸ್ಥಾನವೆಂತಲೂ ಬೊಬ್ಬಿರಿಯುವ ಒಂದು ನವ ಗ್ರಾಮೀಣ ವರ್ಗವಿದೆ. ಗ್ರಾಮ ಮತ್ತು ನಗರಗಳ ನಡುವೆ ನಾಗರಿಕ ಸೌಕರ್ಯಗಳ ಅಂತರವಿದೆ ಎಂಬುದನ್ನು ಮುಚ್ಚಿಡಬೇಕಾಗಿಲ್ಲ. ಆದರೆ ನಗರಗಳ ಹೊಲಸುಗೇರಿಗಳಲ್ಲಿ ಕುಡಿಯುವ ನೀರಿನ ಬರ ಗ್ರಾಮಗಳಂತೆಯೇ ಇದೆ, ಕನಿಷ್ಟ ಸೌಲಭ್ಯಗಳು ಇಲ್ಲವೇ ಇಲ್ಲ ಮನೆಗಳು ನರಕ ಸಮಾನ ಜೋಪಡಿಗಳಾಗಿವೆ ಎಂಬುದನ್ನು ಮರೆಮಾಚುವ ತಾವು ಸುಖಜೀವನ ಮಾಡುವ ಗ್ರಾಮೀಣ ಭೂಮಾಲಿಕರ, ಬಲಾಢ್ಯರ ವಂಚನೆಯನ್ನು ಬಯಲಿಗಿಡಬೇಕು. ಬೆಂಗಳೂರು ಇಂದ್ರನಗರಿಯಾದರೂ ಅಲ್ಲಿ 102 ಸ್ಲಮ್ಮುಗಳಿವೆ. ಸ್ಲಮ್ಮುಗಳಲ್ಲದ ಬಡವರ ಅನೇಕ ವಠಾರಗಳಿವೆ. ಗ್ರಾಮಗಳಲ್ಲಿ ಆಧುನಿಕ ಸೌಕರ್ಯ ಪಡೆದ ಮಹಲುಗಳಿವೆ. ಆದುದರಿಂದ ವರ್ಗದೃಷ್ಟಿ ಮರೆಮಾಚುವ ಇಂಥ ಇಡೀ ಗ್ರಾಮವನ್ನು ಇಡೀ ನಗರದಮೇಲೆ ಎತ್ತಿಕಟ್ಟುವ ಕುತಂತ್ರ ಕುರಿತು ಗ್ರಾಮದ ಕೃಷಿಕಾರ್ಮಿಕರು ಎಚ್ಚರದಿಂದಿರಬೇಕು. ಗ್ರಾಮದ ಬಡವರನ್ನು ಶ್ರೀಮಂತರನ್ನು ಒಟ್ಟಿಗೆ ಸಂಘಟಿಸುವ ಮೋಸವನ್ನು ಬಯಲಿಗಿಡಬೇಕು. ಇವತ್ತು ಹರಿಜನರ ವಿರುದ್ಧ ಅತ್ಯಾಚಾರ ಗ್ರಾಮದ ಬಲಾಢ್ಯರಿಂದ ನಡೆಯುತ್ತಿದೆ. ಆದುದರಿಂದ ಗ್ರಾಮವೆಲ್ಲ ಒಂದು ಎಂಬ ಸರ್ವ ವರ್ಗೀಯ ಸಂಘಟನೆ ಏಳಿಗೆಯಾಗುವುದಿಲ್ಲ. ಏಕೆಂದರೆ ಗ್ರಾಮದ ಬಡವರ ಏಳಿಗೆಗೆ ವರ್ಗೀಕರಿಸಿದ ಸಂಘಟನೆ ಪರಸ್ಪರ ವಿರುದ್ಧ ಹಿತಾಸಕ್ತಿಗಳ ಕಲಬೆರಕೆ, ಆಗಿ, ಅಡ್ಡಿ ಉಂಟಾಗುತ್ತದೆ.

ಹಾಗೆಂದರೆ ಕಳೆದ 30 ವರುಷಗಳಲ್ಲಿ ಗ್ರಾಮ ಮತ್ತು ನಗರಗಳ ಮಧ್ಯೆ ಅನ್ಯಾಯಕರವಾದ ತಾರತಮ್ಯ ಬೆಳೆಯುತ್ತಿದೆ ಎಂಬುದನ್ನು ಅಲ್ಲಗಳೆದಂತಲ್ಲ. ಗ್ರಾಮಗಳ ಅಭ್ಯುದಯವನ್ನು ತುಂಬ ಕಡೆಗಣಿಸಲಾಗಿದೆ. ಕೃಷಿಯನ್ನು ಕೂಡ. ಅಂತೆಯೇ ಸಣ್ಣ ಉದ್ಯಮಗಳನ್ನು ಕೂಡ. ಕೃಷಿಯ ಉತ್ಪನ್ನಕ್ಕೂ ಉದ್ಯೋಗದ ಉತ್ಪನ್ನಕ್ಕೂ ಬೆಲೆ

1. ಕೃಷಿಕಾರ್ಮಿಕರಿಗೆ ಭೂಮಿ ಹಂಚಿಕೆ : ಎಲ್ಲರಿಗೂ ಹಂಚುವಷ್ಟು ಭೂಮಿ ಇಲ್ಲದಿದ್ದರೂ ಇರುವುದನ್ನು ಕೃಷಿಕಾರ್ಮಿಕರಿಗೆ, ಅಂದರೆ ಸಣ್ಣ ರೈತರೂ ಅಂಚಲ ರೈತರೂ ಸೇರಿದಂತೆ ಬಡಕೃಷಿಕಾರ್ಮಿಕರಿಗೆ ಕೊಡಬೇಕು. ಈಗಾಗಲೇ ಜಮೀನು ಇರುವ ನಡುಕಲ ಅಥವಾ ದೊಡ್ಡರೈತರಿಗೆ ಅಥವಾ ನಗರದ ಪ್ರತಿಷ್ಟತರಿಗೆ ಮುಖ್ಯವಾದ ರಸ್ತೆಗಳ ಬದಿಯಲ್ಲಿ ಪೋಕಿ ಸಾಗುವಳಿಗೆ ಕೊಡುವುದನ್ನು ವಿರೋಧಿಸಬೇಕು.

2. ಕೃಷಿಕಾರ್ಮಿಕರಿಗೆ ನ್ಯಾಯವಾದ ಕೂಲಿ ನಿಗದಿ ಮಾಡಬೇಕು. ಇಂದಿನ ಸನ್ನಿವೇಶದಲ್ಲಿ ದಿನಗೂಲಿ 10 ರೂ.ಗಿಂತ ಕಡಿಮೆ ಇರಬಾರದು. ಬೆಲೆ ಏರಿದಂತೆ ಅದೂ ಏರಬೇಕು-ನಗರಗಳ ಕಾರ್ಮಿಕರಿಗೆ ಏರುವಂತೆ.

3. ಹೆಂಗಸರಿಗೆ ಗಂಡಸರಿಗಿಂತ ಅದೇ ಕೆಲಸಕ್ಕೆ ಕಡಿಮೆ ಕೂಲಿ ಕೊಡುವುದನ್ನು ವಿರೋಧಿಸಬೇಕು. ಹಾಗೆಯೇ ಹೆಂಗಸರಿಗೆ ಹೆರಿಗೆ ಕಾಲದಲ್ಲಿ ಸರ್ಕಾರದಿಂದ ನಗದು ಸೌಲಭ್ಯ, ( ಉದಾ : ಹೆರಿಗೆ ಕಾಲದಲ್ಲಿ ಕನಿಷ್ಟ 50 ರೂ. ) ದೊರೆಯುವಂತೆ ಒತ್ತಾಯಿಸಬೇಕು. ಹೆಂಗಸರ ವಿರುದ್ಧ ನಡೆಯುವ ಎಲ್ಲ ಅತ್ಯಾಚಾರವನ್ನು ಸಕ್ರಿಯವಾಗಿ ವಿರೋಧಿಸಬೇಕು. ಇದನ್ನು ತೇಲಿಸುವುದು ತಿಪ್ಪೆ ಸಾರಿಸುವುದು ಅಕ್ಷಮ್ಯ.

4. ಕೃಷಿಕಾರ್ಮಿಕರಿಗೆ ಕನಿಷ್ಟ ಸಾಮಾಜಿಕ ಭದ್ರತೆ, ಅಂದರೆ ವೃದ್ಧಾಪ್ಯ ವೇತನ ಮೊಬೈಲ್ ಆಸ್ಪತ್ರೆ ಮೂಲಕ ಔಷಧಿ ಉಪಚಾರ, ಆಕಸ್ಮಿಕಗಳ ವಿರುದ್ಧ ರಕ್ಷಣೆಗಾಗಿ ವಿಮೆ, ಕಾಯಿಲೆ ಕಾಲದಲ್ಲಿ ಕನಿಷ್ಟ ಪರಿಹಾರ ದೊರೆಯಬೇಕು.

5. ಕೂಲಿಗಾಗಿ ಕಾಳು ಯೋಜನೆ, ನ್ಯಾಯಬೆಲೆಗಳಲ್ಲಿ ಅಗತ್ಯವಸ್ತು ವಿತರಣೆ, ದರಖಾಸ್ತು ಜಮೀನು ಹಂಚಿಕೆ, ಗ್ರಾಮದ ಧನಾಢ್ಯ ಬಲಾಢ್ಯರ ದಬ್ಬಾಳಿಕೆ, ಮನೆ ದಳಗಳ, ಗೃಹನಿವೇಶನ ಹಂಚಿಕೆ, ಬ್ಯಾಂಕಿನಿಂದ ಸಾಲಸಹಾಯ, ಸಮಾಜ ಕಲ್ಯಾಣ ಕಾರ್ಯಕ್ರಮಗಳು, ಸರ್ಕಾರದಿಂದ ಸಣ್ಣ ಅಂಚಲ ರೈತರಿಗೆ ಸಿಗಬೇಕಾದ ಲಾಭಗಳು — ಈ ಸಂಬಂಧವಾಗಿ ಹುಟ್ಟುವ ತಕರಾರುಗಳನ್ನು ಪರಿಹರಿಸಲು ಕೃಷಿಕಾರ್ಮಿಕರ ಪ್ರತಿನಿಧಿಗಳು ಸರ್ಕಾರಿ ಅಧಿಕಾರಿಗಳೂ ಇರುವ ಜಂಟಿಸಮಿತಿಗಳು ರಚಿತವಾಗಬೇಕು.

6. ಕೃಷಿಕಾರ್ಮಿಕರಿಗೆ ಹಾಗೂ ಇತರೆ ಗ್ರಾಮೀಣ ಬಡವರಿಗೆ ಒಂದು ಅಂತ್ಯೋದಯ ಯೋಜನೆ. ಅದರ ಸಲುವಾದ ಸ್ಥಳತೀರ್ಮಾನಗಳು. ಅದರ ಆಡಳಿತಕ್ಕಾಗಿ ಸೂಕ್ತ ವ್ಯವಸ್ಥೆ.

ಯಲ್ಲಿ ಅಪಾರ ತಾರತಮ್ಯವಿದೆ. ಉದಾಹರಣೆಗೆ ಕೀಟನಾಶಕ ಅಥವ ಸೀವೆ ಗೊಬ್ಬರದ ಬೆಲೆ–ಹತ್ತಿ ಅಥವ ಕಬ್ಬಿನ ಬೆಲೆ—ಬಟ್ಟೆ ಅಥವ ಸಕ್ಕರೆ ಬೆಲೆಯಲ್ಲಿ ಸಮತೋಲನವಿಲ್ಲ. ನೀರಾವರಿಯನ್ನು ಕಡೆಗಣಿಸಿ ಹಿರಿ ಉದ್ಯಮಕ್ಕೆ ಮಹತ್ವ ನೀಡಲಾಯಿತು. ಆದರೆ ಈ ಪ್ರಶ್ನೆ ಎತ್ತುವಾಗ ಗ್ರಾಮೀಣ ಧನಾಢ್ಯರೂ ಬಲಾಢ್ಯರೂ ತಮ್ಮ ಶೋಷಣೆಗೆ ಒಳಗಾದ ಬಡರೈತರು ಕೃಷಿಕಾರ್ಮಿಕರಿಗೆ ಏನನ್ನು ಆಶ್ವಾಸನೆ ನೀಡುತ್ತಾರೆ ಎಂಬುದು ಮಹತ್ತರ ಪ್ರಶ್ನೆ. ಗ್ರಾಮೀಣ ಧನಾಢ್ಯರು, ಬಲಾಢ್ಯರು ಗ್ರಾಮೀಣ ಬಡವರ ಧರ್ಮದರ್ಶಿಗಳಲ್ಲ. ಕೃಷಿಕಾರ್ಮಿಕರ ಕನಿಷ್ಠ ಕೂಲಿ, ಕನಿಷ್ಠ ಸಾಮಾಜಿಕ ಭದ್ರತೆ, ಅವರ ಜನತಾಂತ್ರಿಕ ಹಕ್ಕುಗಳು ಇವುಗಳ ಬಗ್ಗೆ ಗ್ರಾಮಗಳ ಈ ಧನಾಢ್ಯರ ಬಲಾಢ್ಯರ ನಿಲುವೇನು. ಇದೂ ಸ್ಪಷ್ಟವಾಗಬೇಕು. ನಗರಗಳ ಹಿರಿ ಉದ್ಯಮಿಗಳು ಗ್ರಾಮಗಳ ಹಿರಿ ರೈತರನ್ನು ಸುಲಿಯುತ್ತಾರೆ. ಅದು ನಿಜ. ಕಚ್ಚಾಮಾಲು ಅಂದರೆ ಕಬ್ಬು ಹತ್ತಿ ಹೊಗೆಸೊಪ್ಪು ಇಂಥವಕ್ಕೆ ಕಾರ್ಖಾನೆಯವರು ನ್ಯಾಯಬೆಲೆ ನೀಡುವುದಿಲ್ಲ. ಉದಾಹರಣೆಗೆ 6–8 ರೂಪಾಯಿಗೆ ಒಂದು ಕಿಲೋ ಮಾರುವ ಸಕ್ಕರೆಯ ಬೆಲೆಯಲ್ಲಿ ಕಬ್ಬು ರೈತನಿಗೆ ದೊರೆಯುವುದು ಖರ್ಚುಕಳೆದು ಗಟ್ಟಿಯಾದ 60–70 ಪೈಸೆ. 10 ರೂಪಾಯಿಗೆ ಮಾರುವ ಒಂದು ಮೀಟರು ಬಟ್ಟೆಯಲ್ಲಿ ಬೆಲೆಯಲ್ಲಿ ಹತ್ತಿ ಬೆಳೆಗಾರನಿಗೆ ದೊರೆಯುವುದು ಖರ್ಚು ಕಳೆದು ಗಟ್ಟಿಯಾದ ಒಂದು ರೂಪಾಯಿ. ಬಾಕಿ ಹಣ ವ್ಯಾಪಾರಿಗಳ, ಸರ್ಕಾರದ ಪಾಲು. ಅದರ ವಿರುದ್ಧ ಹೋರಾಟ ನಡೆಸಲು ಗ್ರಾಮದ ಬಡವರು ಸಂಯುಕ್ತ ರಂಗದ ಮೂಲಕ ಗ್ರಾಮದ ಹಿರಿವರ್ಗದ ರೈತರೊಡನೆ ಸೇರಿ ಕಾರ್ಯಕ್ರಮದ ಆಧಾರದಮೇಲೆ ಪ್ರತಿಭಟಿಸಬಹುದು. ಆದರೆ ಏನೇ ಆದರೂ ಗ್ರಾಮೀಣ ಬಡವರ ನೇತೃತ್ವ ಗ್ರಾಮೀಣ ಶ್ರೀಮಂತರಿಗೆ ಧಾರೆ ಎರೆಯಲಾಗದು. ಸಮಾನ ಸಮಸ್ಯೆಗಳ ಪರಿಹಾರಕ್ಕಾಗಿ ಕೂಡಿ ಹೋರಾಟ ಸರಿ. ಆದರೆ ಸಂಪೂರ್ಣ ಸಮಾವೇಶ ತಪ್ಪು. ಗ್ರಾಮೀಣ ಬಡವರ ಪ್ರತ್ಯೇಕ ಅಸ್ತಿತ್ವ, ಹೋರಾಟ. ಕೃಷಿ ಕಾರ್ಮಿಕರ ಹೋರಾಟದ ಅಡಿಗಲ್ಲು. ಗ್ರಾಮದಲ್ಲಿರುವ ವರ್ಗವ್ಯತ್ಯಾಸವನ್ನು ಬಿಟ್ಟು ಮಾಡಿದ ಭೂದಾನ ಒಂದು ಪ್ರಹಸನವಾಯಿತು. ಇದರ ನೀತಿಪಾಠ ಮರೆಯುವಂತಿಲ್ಲ. ಸ್ವಲ್ಪ ಮಟ್ಟಿಗೆ ಇವತ್ತು ಇಲ್ಲ. ಕಿಸಾನ್ ಸಂಘಟನೆಗಳು ಗ್ರಾಮೀಣ ಬಡವರ ನೆರವಿಗೆ ಧಾವಿಸದಿರಲು ಈ ವರ್ಗಸಂಕರವೇ ಕಾರಣ.

## ಕೃಷಿಕಾರ್ಮಿಕರ ಬೇಡಿಕೆಗಳು —ಹೋರಾಟ

ಬೇಡಿಕೆಗಳಿಲ್ಲದೆ, ಹೋರಾಟವಿಲ್ಲ. ಮೇಲಿನಿಂದ ಬರುವ ಆದೇಶಕ್ಕೆ ಕಾಯದೆ, ಸ್ಥಳೀಯ ಸಮಸ್ಯೆಗಳ ಮೇಲೆ ಹಾಗೂ ಸಾರ್ವತ್ರಿಕ ಬೇಡಿಕೆಗಳ ಸ್ಥಳೀಯ ರೂಪಗಳು ತಲೆದೋರಿದಾಗ ಸ್ಥಳೀಯ ಸಮಿತಿಗಳನ್ನು ರಚಿಸಿ ಹೋರಾಡಬೇಕು. ಅಂಥ ಬೇಡಿಕೆಗಳು ಹೀಗಿರಬಹುದು.

ಕೃಷಿಕಾರ್ಮಿಕರಿಗೆ ಅಗತ್ಯವಾದ ಇತರ ಬೇಡಿಕೆಗಳನ್ನು ಹೀಗೆ ಸೇರಿಸಿ ನಿರೂಪಿಸಬಹುದು.

ಈ ನಿರೂಪಣೆಯೊಡನೆ ಯಥಾಯೋಗ್ಯ ಹೋರಾಟವೂ ಅಗತ್ಯ. ಕೃಷಿ ಕಾರ್ಮಿಕರಲ್ಲಿ ಬಹುತೇಕ ಅನಕ್ಷರಸ್ಥರು. ಆದ್ದರಿಂದ ಅವರ ಸಲುವಾಗಿ ಡಂಭಾಚಾರದ ಕರಪತ್ರಗಳು ಭಿತ್ತಿಪತ್ರಗಳೂ ವ್ಯರ್ಥ. ದೃಶ್ಯಶ್ರಾವ್ಯ ಮಾಧ್ಯಮದ ಅಂದರೆ ನಾಟಕ, ಜಾನಪದ ವಗೈರೆ ಮೂಲಕ ಪ್ರಚಾರ ಪರಿಣಾಮಕಾರಿ.

ಸ್ಥಳೀಯ ಸಮಸ್ಯೆಗಳು ಅಂದರೆ ಒಂದು ಅಥವಾ ಹಲವು ಗ್ರಾಮಮಟ್ಟದ ಸಮಸ್ಯೆಗಳ ಮೇಲೆ ಚಳುವಳಿ ಹೆಚ್ಚು ಪರಿಣಾಮಕಾರಿ. ಏಕೆಂದರೆ, ಗ್ರಾಮದ ಎಲ್ಲರೂ ಕಂಡು ನೋಡಿ ನೇರವಾಗಿ ಭಾಗವಹಿಸುವರು. ದೂರ ಪ್ರಯಾಣ ಹಾಗೂ ಕೆಲಸಕೇಡು ತಪ್ಪುವುದು. ಗ್ರಾಮಗಳಲ್ಲಿ ಮನೆ ಮನೆಗೆ ಪ್ರಚಾರ, ಮೊಹಲ್ಲಾದಲ್ಲಿ ಮೆರವಣಿಗೆ, ಬ್ಯಾಡ್ಜ್ ಧಾರಣೆ ಮೂಲಕ ಚಳುವಳಿ ಒಂದುಮಟ್ಟ ತಲುಪಿದ ನಂತರ ಕೇಂದ್ರೀಕರಣ ಉತ್ತಮ.

ಚಳುವಳಿಯಲ್ಲಿ ಗ್ರಾಮಗಳಲ್ಲಿ ಆಳುವ ವರ್ಗಗಳು ಜಾತೀಯ ಮತೀಯ ಕಲಹಗಳನ್ನು ಹುಟ್ಟುಹಾಕುತ್ತವೆ. ಆದುದರಿಂದ ಎಚ್ಚರ ಅಗತ್ಯ. ಅಲ್ಲದೆ ಕೃಷಿಕಾರ್ಮಿಕರ ನಡುವೆ ಸಹಪಂಕ್ತಿ ಭೋಜನ, ಸರಳ ಸಾಮೂಹಿಕ ವಿವಾಹ, ಪರಸ್ಪರ ನೆರವು ಇಂಥವೂ ಮುಖ್ಯ. ಅಂದರೆ ಬರೇ ಆರ್ಥಿಕ ಹೋರಾಟ ಅಲ್ಲ, ಸಮಗ್ರ ಹೋರಾಟ.

ಚಳುವಳಿ ಎಂದರೆ ಅದರದು ಒಂದೇ ರೂಪವಲ್ಲ. ಅದರಲ್ಲಿ ಬರೇ ಬ್ಯಾಡ್ಜ್ ಧರಿಸುವುದರಿಂದ, ಹಿಡಿದು, ಪಿಕೆಟಿಂಗ್, ಬಾಯ್ಕಾಟು (ದುಷ್ಟ ರೈತಧಣಿಯ ಹೊಲಕ್ಕೆ ಕೆಲಸಕ್ಕೆ ಯಾರೂ ಹೋಗದಿರುವುದು) ಕರಪತ್ರ ಹಂಚಿಕೆ, ಸತ್ಯಾಗ್ರಹ, ಜಾತಾ, ಧರಣಿ, ಬಂದ್ ಈ ಎಲ್ಲವೂ ಸೇರಿವೆ. ಯಾವ ಹಂತದಲ್ಲಿ ಯಾವ ಹೋರಾಟದಲ್ಲಿ ಏನು ಆರಿಸಿಕೊಳ್ಳಬೇಕೆಂಬುದು ಪ್ರಬುದ್ಧ ನೇತೃತ್ವದ ಹೊಣೆಗಾರಿಕೆ.

ಗ್ರಾಮದ ಸಂತೆ, ಅಶ್ವತ್ಥಕಟ್ಟೆ, ಚಾವಡಿ, ಶಾಲೆ, ದೇವಾಲಯ, ಜಾತ್ರೆ ಈ ಎಲ್ಲವೂ ಚಳುವಳಿಯ ಪ್ರಚಾರದ ರಂಗಸ್ಥಳ.

ವ್ಯಾಪಕರೀತಿಯಲ್ಲಿ ವಿಕೇಂದ್ರಿತವಾಗಿ ಪ್ರಚಾರ, ಆಯ್ದ ಸಮಸ್ಯೆಗಳ ಮೇಲೆ ಆಯಕಟ್ಟಾದ ಕಡೆ, ಚಳುವಳಿ, ಅನುಭವದ ಮೇಲೆ ಆಗಾಗ್ಗೆ ವಿಚಾರಮಂಥನ, ಪ್ರತಿ ಸಮಸ್ಯೆಯ ಮೇಲೂ ದುಡಿವವರ ದುಡಿಸುವವರ ನಡುವೆ ವ್ಯತ್ಯಾಸದ ಸ್ಪಷ್ಟೀಕರಣ, ಸಂಘಟಿತ ಕಾರ್ಮಿಕರು, ನಗರಗಳ ವಿದ್ಯಾರ್ಥಿಗಳು ಹಾಗೂ ಬಳಕೆದಾರರ ಹೋರಾಟಗಳೊಡನೆ ಸಮನ್ವಯ, ಇವು ಗಮನಿಸಬೇಕಾದ ಇತರ ಸಂಗತಿಗಳು.